# ನಾಗರಿಕತೆ – ನೆಮ್ಮದಿ

ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ

## ಗೊಂಚಲು ಮನೆಗಳ ಗೋಜಲು

ಹಿಂದೆ ಕಾಲ ನಿಧಾನವಾಗಿ ಸಾಗುತ್ತಿತ್ತು. ಈಗ ಕಾಲ ಸಾಗುವುದೇ ಗೊತ್ತಾಗದ ಹಾಗೆ ವೇಗ ವೇಗ ಓಡುತ್ತಿದೆ. ಹಿಂದೆ ಜನ ಸಾವಧಾನವಾಗಿ, ನೆಮ್ಮದಿಯಿಂದ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಈಗ ಅವಸರವಸರವಾಗಿ, ಆತಂಕ ಆತುರಗಳಲ್ಲಿಯೇ ತೊಡಗುತ್ತಾರೆ. ಹಿಂದಿನ ಕಾಲದಲ್ಲಿ ಜನಕ್ಕೆ ಸ್ವಲ್ಪದರಲ್ಲಿಯೇ ತೃಪ್ತಿ, ಸಂತೋಷ: ಈಗ ಎಷ್ಟಾದರೂ ತೃಪ್ತಿಯಿಲ್ಲ, ಯಾವುದಕ್ಕೂ ಸಂತೋಷವಿಲ್ಲ.

ಇಂದೊಂದು ಸಾಮಾನ್ಯ ವಿದ್ಯಮಾನ. ಜನಕ್ಕೆ ಈಗ ಸರಳ ಸಂತೃಪ್ತ ಜೀವನ ಬೇಕಾಗಿಲ್ಲ: ಶ್ರೀಮಂತಿಕೆಯ ಭೋಗಜೀವನವೇ ಇಷ್ಟ. ಅಂತಹ ಜೀವನಕ್ಕೆ ಬೇಕಾದ್ದು ಬಗೆಬಗೆಯ ಭೋಗವಸ್ತುಗಳು. ಆ ವಸ್ತುಗಳನ್ನು ಪಡೆಯಲು ನ್ಯಾಯವಾದ ಸಂಪಾದನೆ ಸಾಕಾಗುವುದಿಲ್ಲ. ಅದಕ್ಕಾಗಿ ಕಂಡಕಂಡಲ್ಲಿ ಸಾಲ, ಅವಕಾಶ ಸಿಕ್ಕಂತೆಲ್ಲ ಮೋಸದ, ಲಂಚದ ಹಣ. ನೆಮ್ಮದಿಯನ್ನು ಇನ್ನು ಎಲ್ಲಿಂದ ಕೊಂಡು ತರಬೇಕು?

ಇನ್ನೊಂದು ವಿದ್ಯಮಾನ. ಜನ ಸಂದಣಿಯ ಒತ್ತಡದ ಪರಿಣಾಮವಾಗಿ ಪಟ್ಟಣಗಳಲ್ಲಿ ವಸತಿ ಸಮಸ್ಯೆ ಹೆಚ್ಚಾಗುತ್ತಿದೆ. ಪಟ್ಟಣಕ್ಕೆ ವಲಸೆ ಬರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹಳ್ಳಿಗಳು ಹಾಳುಬಿದ್ದು ನೌಕರಿಯ ನೆಲೆಗಳಲ್ಲ ಪಟ್ಟಣಗಳಲ್ಲೇ ಎನ್ನುವ ಸ್ಥಿತಿ ಬೆಳೆಯುತ್ತಿದೆ. ಹೀಗಾಗಿ, ಮೊದಲಿನ ಹಾಗೆ ಜಗಲಿ, ಕೈಸಾಲೆ, ಹಿತ್ತಿಲು, ಖಾಲಿ ಆವರಣ ಇವೆಲ್ಲ ಇರುವ, ಗಾಳಿ ಬೆಳಕು ಚೆನ್ನಾಗಿರುವ, ಬಿಡಿಮನೆಗಳನ್ನು ಕಟ್ಟುವ ಕಾಲ ಮುಗಿದು ಹೋಗಿ, ಎಲ್ಲಿ ನೋಡಿದರೂ ಗೊಂಚಲು ಮನೆಗಳ ಅಪಾರ್ಟ್‌ಮೆಂಟುಗಳು ತಲೆಯೆತ್ತುತ್ತಿವೆ. ವಿಶಾಲವಾದ ನಿವೇಶನಗಳಲ್ಲಿ ಗಾಳಿ ಬೆಳಕು ಚೆನ್ನಾಗಿ ಬರುವಂತೆ ಕಟ್ಟಿರುವ ಗಟ್ಟಿಯಾದ ಹಳೆಯ ಮನೆಗಳನ್ನು ಕೆಡವಿ, ಕೈದೋಟಗಳನ್ನು ನಾಶಮಾಡಿ, ಅಲ್ಲಿ ಗೊಂಚಲು ಮನೆಗಳ ಅಪಾರ್ಟ್‌ಮೆಂಟುಗಳನ್ನು ನಿರ್ಮಿಸುವುದು ಸಾಮಾನ್ಯವಾಗಿದೆ. ಹಳೆಯ ಮನೆಗಳನ್ನು ಹೀಗೆ ಕೆಡವಿ ಹಾಕುವಾಗ, ಅವು ತಮ್ಮ ತಾತ ಮುತ್ತಾತಂದಿರು, ತಂದೆತಾಯಿಗಳು ಬಾಳಿ ಬದುಕಿದ ಮನೆಗಳು; ಸಂತತಿಯ ಕುಡಿಗಳನ್ನು ಹಲಗಾಲ ಹಬ್ಬಿಸುತ್ತ ಆರೈಕೆ ಮಾಡುತ್ತ ಬಂದ ಕಲ್ಪತರುಗಳು ಎಂಬ ಯಾವ ಭಾವನಾತ್ಮಕ ಸಂಬಂಧಗಳೂ ಅವರನ್ನು ಕಾಡುವುದಿಲ್ಲ. ಹಣವೊಂದೇ ಸರ್ವಸ್ವವಾಗುತ್ತದೆ.

ಹೀಗೆ ಕಟ್ಟಿಸಿದ ಗೊಂಚಲು ಮನೆಗಳು ಬೆಂಕಿಪೊಟ್ಟಣಗಳನ್ನು ಪೇರಿಸಿದಂತೆ ಇರುತ್ತವೆ, ಕತ್ತಲ ಗೂಡುಗಳಾಗಿರುತ್ತವೆ. ಒಂದು ಸಣ್ಣ ಬಡಾವಣೆಯಲ್ಲಿಯೇ ಹತ್ತಾರು ಅಪಾರ್ಟ್‌ಮೆಂಟುಗಳೂ, ಒಂದೊಂದು ಅಪಾರ್ಟ್‌ಮೆಂಟುಗಳಲ್ಲಿಯೂ ಹತ್ತಾರು ಒಳ ಮನೆಗಳು, ತಳಮನೆಗಳು, ಮೇಲುಮನೆಗಳು. ಬಿಡಿ ಮನೆಗಳ ವಿಚಾರವಿರಲಿ, ಈಗ ಹೊಲಗದ್ದೆಗಳು, ಕೆರೆ–ಕೊಳಗಳೆಲ್ಲ ಸೈಟುಗಳಾಗುತ್ತಿವೆ.

ಇಂಥ ಮನೆಗಳಿಗೆ ಹೇಳಿಕೊಳ್ಳುವ ಸೌಕರ್ಯ ಎಂದರೆ, ಆವರಣ ಎಂಬುದು ಇರುವುದಿಲ್ಲವಾದ್ದರಿಂದ ಸ್ವಚ್ಛತೆಯ



ಕೆಲಸ ಅಷ್ಟಿಲ್ಲ. ಆದರೆ ಇಂಥವನ್ನು ಕೊಳ್ಳುವಾಗ, ಮಾರುವಾತ ಕೇಳಿದ ಬೆಲೆ ಕೊಡಬೇಕು, ಲಕ್ಷ ಲಕ್ಷ ತೆರಬೇಕು. ದಿನದಿನಕ್ಕೂ ಇವುಗಳ ಬೆಲೆ, ಬಾಡಿಗೆಗಳು ಚಿನ್ನ ಬೆಳ್ಳಿಗಳ ಬೆಲೆಗಳನ್ನೂ ಮೀರಿ ಮುನ್ನಡೆಯುತ್ತಿವೆ. ಮುಂದೆ ಸಾಮಾನ್ಯರೂ ಮಧ್ಯಮ ವರ್ಗದವರೂ ಹೇಗೆ ಇವನ್ನು ತಾಳಿಕೊಳ್ಳುವರೋ? ತಿಳಿಯದು.

## ಪ್ರಕೃತಿಯ ವಿಕೃತಿ

ಮುಂದುವರಿದ ವಿದ್ಯಮಾನವೆಂದರೆ: ಫ್ಲ್ಯಾಟುಗಳಿಗೆ ಪೌರಸೌಕರ್ಯಗಳು ಆಗಬೇಕಷ್ಟೆ. ಬೀದಿಗಳು ಅಗಲವಾಗಬೇಕು, ಪಾದಚಾರಿ ದಾರಿಗಳು ಏರ್ಪಡಬೇಕು. ಇವುಗಳ ಬೆನ್ನಿಗೇ ಬರುತ್ತವೆ, ಅಂಗಡಿ ಮುಂಗಟ್ಟುಗಳು, ಹೋಟಲು ಬಾರುಗಳು. ಹೋಟಲು ಬಾರುಗಳಂತೂ ಹೆಚ್ಚು ಹೆಚ್ಚು ಜನರನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವ ಸೂಜಿಗಲ್ಲುಗಳು, ಪಾದಚಾರಿಪಥಗಳಲ್ಲಿ ಜನ ತಳ್ಳಾಡಿಕೊಂಡು ಸಿಗರೇಟು ಹೊಗೆ ಸಹಿಸಿಕೊಂಡು ನಡೆಯಬೇಕಾಗುತ್ತದೆ. ಬೀದಿಗಳು ಅಗಲವಾಗಿ, ಅಂಗಡಿ ಮುಂಗಟ್ಟುಗಳು ಬರಬೇಕು ಎಂದರೆ, ಸಾಲುಮರಗಳನ್ನೆಲ್ಲ

ಸರಣಿಯಾಗಿ ಕೊಲ್ಲದೆ ವಿಧಿಯಿಲ್ಲ. ದಶಕ ದಶಕಗಳ ಕಾಲ ಪ್ರಕೃತಿಯ ಮಡಿಲ ಮಕ್ಕಳಾಗಿ ಬೆಳೆದು ದೊಡ್ಡವಾದ, ಜನೋಪಕಾರಿಯಾದ ಈ ಮರಗಳನ್ನು ಮರುಹುಟ್ಟು ಪಡೆಯದಂತೆ ಮುಗಿಸಿಬಿಡುವ ವಿಷಯದಲ್ಲಿ, ಪುರಸಭೆಗಳೂ ನಗರಸಭೆಗಳೂ ಉತ್ಸಾಹಿಯಾಗಿರುತ್ತವೆ.

ಈಗ ೨೦ ವರ್ಷಗಳಿಗೂ ಹಿಂದೆ ಮೈಸೂರಿನಲ್ಲಿ ನಾನಿರುವ ಬಡಾವಣೆಗೆ ನಾನು ಮನೆಯನ್ನು ಕಟ್ಟಿಕೊಂಡು ಬಂದಾಗ, ಇಲ್ಲಿಯ ಮುಖ್ಯ ರಸ್ತೆಯ ಅಂಗಡಿ ಬೀದಿಯ ಎರಡೂ ಕಡೆಗಳಲ್ಲಿಯೂ ಸುಪುಷ್ಟವಾಗಿ, ಸದೃಢವಾಗಿ ಬೆಳೆದ ಸಾಲುಮರಗಳಿದ್ದವು, ಮಧ್ಯಾಹ್ನದ ಸುಡುಬಿಸಿಲಲ್ಲಿಯೂ ತಂಪು ನೆರಳಿನ ಆಸರೆಯಲ್ಲಿ ನೆಮ್ಮದಿಯಿಂದ ದಾರಿಯಲ್ಲಿ ನಡೆಯಬಹುದಾಗಿತ್ತು. ಈಗ ಆ ಹೆಮ್ಮರಗಳನ್ನೆಲ್ಲ ಕಡಿದುಹಾಕಲಾಗಿ ಬಿಸಿಗಾಳಿಯಲ್ಲಿ ಬೀಸಿ ಬರುವ ಧೂಳಿನ ಜೊತೆಗೆ ಪಾದಚಾರಿಪಥವನ್ನು ಆಕ್ರಮಿಸಿ ನಿಂತ, ಪಡ್ಡೆ ಹುಡುಗರ ಸಿಗರೇಟು ಹೊಗೆ ಸೇವಿಸುತ್ತ ಮೂಗು ಮುಚ್ಚಿಕೊಂಡು ದಾರಿಯಲ್ಲಿ ನಡೆಯಬೇಕಾಗಿದೆ.

ನಗರಗಳು ಬೆಳೆದ ಹಾಗೆ, ನಾಗರಿಕ ಸೌಲಭ್ಯಗಳು ಹೆಚ್ಚಿದ ಹಾಗೆ ಶಬ್ದ-ಜಲ-ವಾಯು ಮಾಲಿನ್ಯ ಕೂಡ ಹೆಚ್ಚಿ ಸಮುದಾಯದ ನೆಮ್ಮದಿ ಹಾಳಾಗುತ್ತಿದೆ. ರಸ್ತೆಗಳಲ್ಲಿ ವಾಹನಗಳ ಸಂಚಾರ ಹೆಚ್ಚಿ ಅವು ಹರಿದ ಚಿಂದಿಬಟ್ಟೆಗಳಂತೆ ಆಗುತ್ತಿವೆ. ಶಾಲಾಕಾಲೇಜು ಆವರಣಗಳೂ ಮಾರುಕಟ್ಟೆ ಪ್ರದೇಶಗಳೂ ತ್ಯಾಜ್ಯವಸ್ತುಗಳು ಚೆಲ್ಲಾಡಿ ಕಲುಷಿತಗೊಳ್ಳುತ್ತಿವೆ. ಜನ ತಾವೇ ಪೌರಪ್ರಜ್ಞೆಯಿಂದ ನಡೆದುಕೊಂಡು ವಾತಾವರಣದ ನೈರ್ಮಲ್ಯ ಸೌಂದರ್ಯಗಳನ್ನು ಕಾಪಾಡುವ ಕಾಲ ಹೊರಟುಹೋಯಿತು. ಈ ವಿಷಯದಲ್ಲಿ ಪುರಸಭೆಗಳೂ ನಗರಸಭೆಗಳೂ ಖಾಸಗಿ ಸೇವಾಸಂಸ್ಥೆಗಳೂ ಹೆಚ್ಚಿನ ಮುತುವರ್ಜಿ ವಹಿಸಬೇಕು. ನಮ್ಮ ಜನಕ್ಕೆ ಸಂಯಮ, ಆತ್ಮವಿನಿಗ್ರಹ, ಸಾಮಾಜಿಕ ಜವಾಬ್ದಾರಿ ಇಲ್ಲವಾದ್ದರಿಂದ ಭಯ ಮತ್ತು ಶಿಕ್ಷೆಗಳ ಕಡಿವಾಣವನ್ನು ಬಲಪಡಿಸುವುದು ಅನಿವಾರ್ಯವಾಗಿದೆ. ಚರಂಡಿಗಳ ಅಕ್ಕಪಕ್ಕಗಳಲ್ಲಿಯೇ ಪಾನಿಪೂರಿ ಅಂಗಡಿಗಳೂ ಇಡ್ಲಿ ದೋಸೆ ಅಂಗಡಿಗಳೂ ಇರುತ್ತಿದ್ದು, ನಮ್ಮ ಯುವಕ ಯುವತಿಯರು ಅಲ್ಲಿಯೇ ಆರಾಮವಾಗಿ ನಿಂತು ಕುಳಿತು, ಸಾವಕಾಶವಾಗಿ ಹರಟೆ ಹೊಡೆಯುತ್ತ ತಿನ್ನುವುದನ್ನು ಕಂಡಾಗ ನನಗೆ ಆಶ್ಚರ್ಯವಾಗುತ್ತದೆ. ಭಯವಾಗುತ್ತದೆ. ನಮ್ಮ ಜನಕ್ಕೆ ಎಂದು ಬುದ್ಧಿ ಬರುವುದೋ ತಿಳಿಯದು. ▪

## ಧರ್ಮ ಚಿಂತನೆ

**ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।**
**ತಸ್ಮಾದ್ಧರ್ಮೋ ನ ಹಂತವ್ಯಃ**
**ಮಾನೋ ಧರ್ಮೋ ಹತೋಽವಧೀತ್ ॥**

ಧರ್ಮವನ್ನು ಮೀರಿದರೆ ಅದು ನಿಮಗೆ ಹಾನಿಯುಂಟುಮಾಡುತ್ತದೆ. ಧರ್ಮವನ್ನು ಆಚರಿಸಿದರೆ ರಕ್ಷಣೆಯುಂಟಾಗುತ್ತದೆ. ಆದುದರಿಂದ ಧರ್ಮವನ್ನು ಮೀರಬಾರದು. ಧರ್ಮವನ್ನು ಮೀರಿ ಹಾಳಾಗುವುದು ಬೇಡ. (ಮನುಸ್ಮೃತಿ, ೮-೧೫)

**ಧರ್ಮಃ ಶ್ರುತೋ ವಾ ದೃಷ್ಟೋ ವಾ**
**ಸ್ಮೃತೋ ವಾ ಕಥಿತೋಽಪಿ ವಾ ।**
**ಸಂಮೋದಿತೋ ವಾ ರಾಜೇಂದ್ರ ಪುನಾತಿ ಪುರುಷಂ ಸದಾ ॥**

ಎಲೈ ರಾಜನೇ, ಧರ್ಮವನ್ನು ಕೇಳಿದರೂ, ನೋಡಿದರೂ, ನೆನೆಸಿಕೊಂಡರೂ, ಹೇಳಿದರೂ, ಅನುಮೋದಿಸಿದರೂ ಸಹ ಅದು ಯಾವಾಗಲೂ ಮನುಷ್ಯನನ್ನು ಪವಿತ್ರಗೊಳಿಸುತ್ತದೆ. (ಸುಭಾಷಿತಸುಧಾನಿಧಿ)

**ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಂ ।**
**ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥**

ಧರ್ಮದಿಂದಲೇ ಅರ್ಥ; ಧರ್ಮದಿಂದಲೇ ಸುಖ. ಸಕಲ ಅಭೀಷ್ಟವೂ ಧರ್ಮದಿಂದ ಕೈಗೂಡುತ್ತದೆ. ಈ ಜಗತ್ತು ಧರ್ಮದ ತಳಹದಿಯ ಮೇಲೆ ನಿಂತಿದೆ. (ರಾಮಾಯಣ, ಅಯೋಧ್ಯಾ ಕಾಂಡ ೯-೩೦)

**ಧರ್ಮೋ ಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಂ।**
**ಧರ್ಮಸಂಶ್ರಿತಮೇತಚ್ಚ ಪಿತುರ್ವಚನಮುತ್ತಮಮ್ ॥**

ಲೋಕದಲ್ಲಿ ಧರ್ಮವೇ ಶ್ರೇಷ್ಠವಾದದ್ದು. ಧರ್ಮದಲ್ಲಿ ಸತ್ಯವು ನೆಲೆಸಿದೆ. ಪಿತೃವಾಕ್ಯಪರಿಪಾಲನೆಯು ಧರ್ಮವನ್ನಾಶ್ರಯಿಸಿದೆ.
(ವಾಲ್ಮೀಕಿ ರಾಮಾಯಣ, ಅಯೋಧ್ಯಾ ಕಾಂಡ ೨೧-೪೧)

**ಧರ್ಮೋ ಹಿ ಯತ್ನೈಃ ಪುರುಷೇಣ ಸಾಧ್ಯಃ**
**ಭುಜಂಗಜಿಹ್ವಾಚಪಲಾ ನೃಪಶ್ರಿಯಃ ।**
**ತಸ್ಮಾತ್ ಪ್ರಜಾಪಾಲನಮಾತ್ರಬುದ್ಧ್ಯಾ**
**ಹತೇಷು ದೇಹೇಷು ಗುಣಾ ಧರಂತೇ ॥**

ಮನುಷ್ಯನು ಕಷ್ಟಪಟ್ಟಾದರೂ ಧರ್ಮವನ್ನು ಅಂದರೆ ಒಳ್ಳೆಯ ಕೆಲಸವನ್ನು ಮಾಡುತ್ತಿರಬೇಕು. ರಾಜ್ಯಸಂಪತ್ತು ಹಾವಿನ ನಾಲಗೆಯಂತೆ ಅನಿತ್ಯ, ಚಂಚಲ ಆದುದರಿಂದ ಅರಸನು ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅವನು ಸತ್ತಮೇಲೂ ಅವನ ಒಳ್ಳೆಯ ಗುಣಗಳು ಈ ಧರ್ಮದಿಂದ ಉಳಿಯುತ್ತವೆ. (ಕರ್ಣಭಾರ ೧-೧೭)

**ಧಾರಣಾದ್ಧರ್ಮ ಇತ್ಯಾಹುರ್ಧರ್ಮೋ ಧಾರಯತೇ ಪ್ರಜಾಃ ।**
**ಯತ್ ಸ್ಯಾದ್ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥**

ಧಾರಣೆ ಮಾಡುವುದರಿಂದ 'ಧರ್ಮ' ಎನ್ನುತ್ತಾರೆ. ಧರ್ಮವು ಪ್ರಜೆಗಳನ್ನು ಧರಿಸುತ್ತದೆ. ಯಾವುದರಲ್ಲಿ ಇಂಥ ಧರಿಸುವ ಶಕ್ತಿಯುಂಟೋ ಅದು ಧರ್ಮವೆಂದು ನಿಶ್ಚಯ. (ಮಹಾಭಾರತ, ಕರ್ಣಪರ್ವ ೬೯-೫೮) (ಧಾರಣ=ಹಿಡಿದು ನಿಲ್ಲಿಸುವುದು ಮತ್ತು ಪಾಲನೆ.)

**ಧೃತಿ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥**

ಧೈರ್ಯ, ತಾಳ್ಮೆ, ಸಿಟ್ಟು ಮೊದಲಾದವನ್ನು ನಿಗ್ರಹಿಸುವುದು, ಅನ್ಯಾಯದಿಂದ ಇತರರ ದ್ರವ್ಯವನ್ನು ತೆಗೆದುಕೊಳ್ಳದೇ ಇರುವುದು, ಶುಚಿಯಾಗಿರುವುದು, ಇಂದ್ರಿಯಗಳ ನಿಗ್ರಹ, ಶಾಸ್ತ್ರಜ್ಞಾನ, ಸತ್ಯ, ಶಾಂತಿ- ಇವು ಹತ್ತು ಧರ್ಮವೆನಿಸುತ್ತದೆ. (ಮನುಸ್ಮೃತಿ, ೬-೯೨)

(ಸಂಗ್ರಹ)